ಶ್ರೀ ಎಸ್. ಎಚ್. ತಮ್ಮಯ್ಯ.—ಹೈಸ್ಕೂಲುಗಳಿಗೆ ಸರ್ಕಾರದವರು ಗ್ರಾಂಟು ಕೊಡುವಾಗ ಅನುಸರಿಸುವ ರೀತಿ ನೀತಿಯೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ ರೂಲ್ಸ್ ಇವೆ. ಅದರ ಪ್ರಕಾರ ಕೊಡುತ್ತಾರೆ. ಖಾಸಗಿಯವರು ಎಷ್ಟು ಕೊಡುತ್ತಾರೆ, ನಾವೆಷ್ಟು ಕೊಡಬೇಕು ಎಂಬುದಕ್ಕೆ ಕಾನೂನಿದೆ.

ಶ್ರೀ ಎಸ್. ಎಚ್. ತಮ್ಮಯ್ಯ.—1946-47 ರಲ್ಲಿ ಪ್ರಾರಂಭವಾದ ಹೈಸ್ಕೂಲುಗಳಿಗಿನ್ನೂ ಕೊಡದೆ 1950-51ರಲ್ಲಿ ಪ್ರಾರಂಭವಾಗಿರುವ ಹೈಸ್ಕೂಲುಗಳಿಗೆ ಗ್ರಾಂಟು ಕೊಟ್ಟಿರುವುದಕ್ಕೆ ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲೆಲ್ಲಿ ಲೋಕಲ್ ಪೀಪಲ್ ಮುಂದೆ ಬಂದು ಸಹಾಯ ಮಾಡಿದ್ದಾರೋ ಅಲ್ಲಿ ಜಾಗ್ರತೆ ಮಾಡಿದ್ದೇವೆ, ಬಾಕಿ ಕಡೆ ನಿರ್ಧಾನವಾಗಿದೆ.

ಶ್ರೀ ಎಸ್. ಎಚ್. ತಮ್ಮಯ್ಯ.—ಸಾಲಿಗ್ರಾಮ ಮುನಿಸಿಪಲ್ ಹೈಸ್ಕೂಲಿಗೆ ಇದುವರೆಗೂ ಗ್ರಾಂಟು ಕೊಟ್ಟಿಲ್ಲದಿರುವುದಕ್ಕೆ ಕಾರಣವೇನು ;

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರ ಮಾಡುತ್ತೇವೆ.

ಶ್ರೀ ಎಸ್. ಎಚ್. ತಮ್ಮಯ್ಯ.—Aided ಹೈಸ್ಕೂಲುಗಳು ಯಾರ ಆಡಳಿತದಲ್ಲಿವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಹಳ ಹೆಚ್ಚಾಗಿ ಖಾಸಗಿ ಮ್ಯಾನೇಜ್‌ಮೆಂಟಿನಲ್ಲಿವೆ.

ಶ್ರೀ ಎಸ್. ಎಚ್. ತಮ್ಮಯ್ಯ.—ಈ ಸ್ಕೂಲುಗಳ ಆಡಳಿತದಲ್ಲಿ ಸರ್ಕಾರದ ಹಸ್ತಕ್ಷೇಪವಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ರೆಕಗ್‌ನಿಷನ್ ಕೊಡುತ್ತೇವೆ, ಇನ್‌ಸ್ಪೆಕ್ಷನ್ ಮಾಡುತ್ತೇವೆ, ಗ್ರಾಂಟು ಕೊಡುತ್ತೇವೆ, ಅಡ್ಮಿಷನ್ ಹೇಗಿದೆಯೆಂದು ನೋಡುತ್ತೇವೆ.

ಶ್ರೀ ಎಸ್. ಎಚ್. ತಮ್ಮಯ್ಯ.—ಅಲ್ಲಿನ ಕಾರ್ಯದರ್ಶಿಗಳು ಕೆಲವರು 100—200 ರೂಪಾಯಿ ಸಂಬಳ ತೆಗೆದುಕೊಳ್ಳುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಎಸ್. ಎಚ್. ತಮ್ಮಯ್ಯ.—ಹಾಗಿದ್ದರೆ 200 ರೂಪಾಯಿಗಳ ಸಂಬಳ ತೆಗೆದುಕೊಳ್ಳುವುದು ನ್ಯಾಯ ಸಮ್ಮತವಲ್ಲವೆಂಬುದನ್ನು ಗಮನಿಸುವಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ವಿಚಾರಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಚಾಮರಾಜನಗರ ಹೈಸ್ಕೂಲು ಕಟ್ಟಡ ಬಹಳ ಶಿಥಿಲವಾಗಿದೆ, ಅದನ್ನು ರಿಪೇರಿ ಮಾಡಬೇಕು ಎಂದು ಸರ್ಕಾರಕ್ಕೆ ಮುನಿಸಿಪಾಲಿಟಿಯಿಂದ ಮನವಿ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಬಿ. ರಾಚಯ್ಯ.—ಅವರು ಮೆಷೀನ್ ಟೂಲ್ಸ್ ಥಾರ್ಜಸ್ ಸರ್ಕಾರ ವಹಿಸಬೇಕು, ತಾವು ಕೊಡುವ ದಕ್ಕಾಗುವುದಿಲ್ಲ ಎಂದು ಮನವಿ ಮಾಡಿದ್ದಾರೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವರು ಆರೀತಿ ಮಾಡಿದ್ದಾರೆ.

ಶ್ರೀ ಬಿ. ರಾಚಯ್ಯ.—ಈ ಮನವಿಗಳಿಗೆ ಏನು ಸಹಕಾರ ದೊರೆತಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಅಂಗೀಕಾರ ಮಾಡುವುದು ಕಷ್ಟವೆಂದು ಜವಾಬು ಕೊಟ್ಟಿರುವಹಾಗೆ ಜ್ಞಾಪಕವಿದೆ.

Primary School Buildings in Koratagere and Madhugiri Taluks.

Q.—795. Sri MUDDURAMIAH (Koratagere—Madhugiri).—

Will the Government be pleased to state :—

(*a*) the number of Primary School building constructions sanctioned since 1947 in the Koratagere and Madhugiri Taluks (the names of places to be kindly furnished) ;

(*b*) the number completed and the number stopped after putting up the basement ?

A.—Sri A. G. RAMACHANDRA RAO (Minister for Law and Education).—

(*a*) *Koratagere Taluk.* 16		*Madhugiri Taluk.* 22	
A statement showing the names of places is appended below :			
(*b*) Works completed ...	8	Works completed ...	12
Works in incomplete stage ...	6	Works in incomplete stages	10
Works to be started ...	2		
Total ...	16	Total ...	22

(SRI A. G. RAMACHANDRA RAO.)

Statement showing the names of Primary School buildings sanctioned since 1947.

KORATAGERE TALUK.

	Name	*Stage of Work*
1	Kannada Primary School at Kolala ...	At foundation stage
2	Do Kambadahalli ...	Completed
3	New Type Middle School at Jetty-agrahara ...	do
4	Urdu Primary Boys' School, Holavanahalli ...	do
5	Urdu Primary Girls' School Do ...	do
6	Extension Primary School, Akkirampura ...	do
7	Constructing Primary School, Cheeragondanahalli.	Basement level
8	Do Yele-Rampura ...	Completed
9	Do Bylagondlu ...	do
10	Do Surenahalli ...	Up to roof level
11	Do Irakasandra Village ...	Completed
12	Do Kodalahalli ...	Site not given Possession.
13	Do Jonigarahalli ...	Basement level
14	Do Negalala ...	To be started

(Sanctioned in February 1954).

15	Do Bommaldevipura ...	At foundation stage
16	Do Kalliapura ...	At foundation stage

Note.—Buildings which are stopped at foundation stage and basement level are not executed by Public Works Department.

MADHUGIRI TALUK.

1	Additional rooms to Kannada Primary Boys' School at Gangalakunte.	Completed
2	Construction of Kannada Primary Boys' School at Gondihalli.	do
3	Construction of Kannada Primary Boys' School at Byalya for Adikarnatakas.	Nearing completion
4	Do Reddihally ...	Completed
5	Do Balachowdanahalli .	do
6	Extending by 4 rooms at Mandipet at Madhugiri.	do
7	Do Midigesi ...	do
8	Kannada Primary Boys' School at Doddaveeragondanahalli.	Not yet started
9	Do Doddalavatta	Nearing completion
10	Do Gollahalli ...	Completed
11	Do Siddaragal ...	do
12	Construction of additional rooms at Kavanadala ...	do
13	Extending Kannada Primary Boys' School at Dodderi	do
14	Do Nellekamanahalli ...	Nearing completion
15	Primary Boys' School at Kumbarahalli ...	Completed
16	Do Hanumadi ...	do
17	Do Theriyur ...	Nearing completion
18	Do Singanahalli ...	do do
19	Do Gundagal ...	do do
20	Do Kotagundanahalli ...	Under execution
21	Construction of New Type Middle School at Nitrahalli.	Under progress
22	Constructing New Type Middle School at Tharur.	do do

Note:—No buildings are left at basement level.

ಶ್ರೀ ಮುದ್ದುರಾಮಯ್ಯ.—ಬೊಮ್ಮಲದೇವಿಪುರ ಮತ್ತು ಕಳ್ಳಿಯಪುರ ಗ್ರಾಮಗಳ ಸ್ಕೂಲು ಕಟ್ಟಡದ ಕೆಲಸವನ್ನು ಮರಾಮತ್ತು ಇಲಾಖೆ ಮಾಡುವುದಿಲ್ಲವೆಂದು ಹೇಳಿದರೆ ಆ ಕೆಲಸವನ್ನು ಮಾಡುವವರು ಯಾರು ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಿಸಿ ಹೇಳುತ್ತೇನೆ.

ಶ್ರೀ ಮುದ್ದುರಾಮಯ್ಯ.—1948ರಲ್ಲಿ ಇದನ್ನು ರೆವೆನ್ಯೂ ಇಲಾಖೆಯಿಂದ ಪಬ್ಲಿಕ್ ವರ್ಕ್ಸ್ ಇಲಾಖೆಗೆ ವರ್ಗ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಮುದ್ದುರಾಮಯ್ಯ.—ಸುಮಾರು ಐದಾರು ವರ್ಷಗಳ ಹಿಂದೆ ತಳಹದಿ ಹಾಕಿ ಅಲ್ಲಿಗೇ ಆ ಕೆಲಸ ನಿಂತಿರುವುದಕ್ಕೆ ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಿಸುತ್ತೇವೆ.

ಶ್ರೀ ಮುದ್ದುರಾಮಯ್ಯ.—ಸ್ಕೂಲನ್ನು ಅಲ್ಲಿ ಮುರದ ಕೆಳಗೆ ನಡೆಸುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಮುದ್ದುರಾಮಯ್ಯ.—ಆದಷ್ಟು ಜಾಗ್ರತೆ ಈ ಕಟ್ಟಡ ಪೂರ್ಣಗೊಳಿಸುವುದು ಸರ್ಕಾರದ ಕರ್ತವ್ಯವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪ್ರಯತ್ನ ಮಾಡೋಣ.

ಶ್ರೀ ಮುದ್ದುರಾಮಯ್ಯ.—ದೊಡ್ಡ ವೀರಗೊಂಡನ ಹಳ್ಳಿಯಲ್ಲಿ ಸ್ಕೂಲು ಮಂಜೂರಾಗಿರುವುದು ಯಾವಾಗ?

ಶ್ರೀ ಎ. ಜಿ. ರಾಮಚಂದ್ರರಾವ್.—ತಾರೀಖು ಗೊತ್ತಿಲ್ಲ, ವಿಚಾರಿಸುತ್ತೇವೆ.

ಶ್ರೀ ಮುದ್ದುರಾಮಯ್ಯ.—ಈ ಕೆಲಸವನ್ನು ಈ ವರ್ಷ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪ್ರಯತ್ನ ಮಾಡುತ್ತೇವೆ.

School Building at Yeldur, Srinivaspur Taluk.

Q.—826. Sri G. NARAYANA GOWDA (Mulbagal—Srinivaspur).—

Will the Government be pleased to state :—

(*a*) whether any deposit has been made by the public for the construction of a school building at Yeldur, Srinivasapur Taluk ;

(*b*) the steps that they have taken in this regard ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) Necessary plan and estimate for the construction of a building to suit the present requirements of the school have been called for from the Public Works Department.

ಶ್ರೀ ಜಿ. ನಾರಾಯಣಗೌಡ.—ಶ್ರೀನಿವಾಸಪುರ ತಾಲ್ಲೂಕು, ಯಲ್ಡೂರಿನಲ್ಲಿ ಸ್ಕೂಲು ಕಟ್ಟಡಕ್ಕೆ ಸಾರ್ವಜನಿಕರು ಯಾವಾಗ ಠೇವಣಿ ಮಾಡಿರುವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಡಿ ಹೇಳುತ್ತೇನೆ.

ಶ್ರೀ ಜಿ. ನಾರಾಯಣಗೌಡ.—ಅಲ್ಲಿ ಮಾಧ್ಯಮಿಕ ಶಾಲೆ ಮತ್ತು ಪ್ರಾಥಮಿಕ ಶಾಲೆ ಒಂದೇ ಕಟ್ಟಡದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಜಿ. ನಾರಾಯಣಗೌಡ.—ಪ್ರಾಥಮಿಕ ಶಾಲೆ ಬೆಳಿಗ್ಗೆ ನಡೆಸಿ 11 ಗಂಟೆಯಿಂದ ಮಾಧ್ಯಮಿಕ ಶಾಲೆ ನಡೆಸುವುದು ಸರ್ಕಾರದ ಅವಗಾಹನೆಗೆ ಬಂದಿದೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಜಿ. ನಾರಾಯಣಗೌಡ.—ಠೇವಣಿ ಮಾಡಿ 7-8 ವರ್ಷವಾಯಿತು. ಕಟ್ಟಡ ಕಟ್ಟಿಸಲು ಎಸ್ಟಿಮೇಟ್ ಕಾಲ್ ಫಾರ್ ಮಾಡಿರುವುದು ಯಾವಾಗ ?

ಶ್ರೀ ಎ. ಜಿ. ರಾಮಚಂದ್ರರಾವ್.—ಡಿಪಾಜಿಟ್ ಮಾಡಿರುವುದು 14-4-1949ರಲ್ಲಿ. ಎಸ್ಟಿಮೇಟ್ ಕಾಲ್ ಫಾರ್ ಮಾಡಿರುವ ತಾರೀಖು ಇಲ್ಲಿಲ್ಲ, ವಿಚಾರಿಸುತ್ತೇನೆ.

ಶ್ರೀ ಜಿ. ನಾರಾಯಣಗೌಡ.—ಸರ್ಕಾರದವರು ಮಂಜೂರು ಮಾಡುವಾಗ ಡಿಪಾಜಿಟ್ ಮಾಡಿರುವ ಕಡೆಗೆ ಪ್ರಯಾರಿಟಿ ಕೊಡುವ ನೀತಿಯನ್ನನುಸರಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಜಿ. ನಾರಾಯಣಗೌಡ.—ಹಾಗಾದರೆ ಈ ಕಟ್ಟಡ ಇಷ್ಟು ನಿಧಾನವಾಗುವುದಕ್ಕೆ ಕಾರಣವೇನು?

ಶ್ರೀ ಎ. ಜಿ. ರಾಮಚಂದ್ರರಾವ್.—ಡಿಪಾಜಿಟ್ಟಿನಲ್ಲಿ ಕೂಡ ಯೂನಿಫಾರಂ ಡಿಪಾಜಿಟ್ ಇರುವುದಿಲ್ಲ, ಹೆಚ್ಚು ಕಡಮೆಯಿರುತ್ತದೆ. ಅದನ್ನು ನೋಡಿ ನಿರ್ಧಾರ ಮಾಡಬೇಕು.

ಶ್ರೀ ಜಿ. ನಾರಾಯಣಗೌಡ.—ಆದರೂ ಅವಶ್ಯಕತೆ ನಹ ನೋಡಿ ಕಟ್ಟಡ ಬೇಗ ಮಾಡುವುದಕ್ಕೆ ಸಾಧ್ಯವಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವಶ್ಯಕತೆ, ಹಣ ನಹಾಯ ಇವೆರಡೂ ನೋಡಬೇಕು.

ಶ್ರೀ ಜಿ. ನಾರಾಯಣಗೌಡ.—ಸಾರ್ವಜನಿಕರು ಠೇವಣಿ ಮಾಡಿದಾಗ, ಅವರ ಕೋಟಾ ಬಂದಾಗ ತಕ್ಕ ನೀತಿಯನ್ನನುಸರಿಸುವುದು ಸರ್ಕಾರದ ಕರ್ತವ್ಯವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು, ಪೂರ್ತಿಯಾಗಿ ಕೋಟಾ ಬಂದಾಗ ಸರ್ಕಾರದವರು ಜಾಗ್ರತೆ ಮಾಡಲು ಪ್ರಯತ್ನ ಮಾಡುತ್ತಾರೆ.

ಶ್ರೀ ಜಿ. ನಾರಾಯಣಗೌಡ.—ಬಂದ ಮೇಲೆ ತಾನೆ ಎಸ್ಟಿಮೇಟ್ ಮಾಡಿರುವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ತಾರೀಖು ಗೊತ್ತಿಲ್ಲ, ನೋಡಿ ಹೇಳುತ್ತೇನೆ.